ಮರಳು ಸಾಗಾಣಿಕೆಯಿಂದ ರಸ್ತೆ ಹಾಳಾಗಿರುವುದು

1848 (1589); ಶ್ರೀ ಅರಬೈಲ್ ಶಿವರಾಮ್ ಹೆಬ್ಬಾರ್ (ಯಲ್ಲಾಪುರ)

ಅ) ಯಲ್ಲಾಪುರ ತಾಲ್ಲೂಕಿನ ಲೋಕೋಪಯೋಗಿ ರಸ್ತೆಗಳಲ್ಲಿ ಮರಳು ಲಾರಿ ಸಂಚಾರದಿಂದ ರಸ್ತೆ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಮರಳು ಸಾಗಾಣಿಕೆಯಿಂದ ಇಲಾಖೆಗೆ ಬಂದಿರುವ ಆದಾಯವೆಷ್ಟು; ಮತ್ತು ಈ ಆದಾಯವನ್ನು ಸದರಿ ರಸ್ತೆಗಳ ದುರಸ್ಥಿಗೆ ಬಳಸಲಾಗುವುದೇ; ಇಲ್ಲದಿದ್ದಲ್ಲಿ, ಇದಕ್ಕೆ ಕಾರಣವೇನು;

ಇ) ಸ್ಥಳೀಯವಾಗಿ ಬಂದ ಆದಾಯದಿಂದ ರಸ್ತೆ ದುರಸ್ತಿ ಮಾಡುವುದು ಸೂಕ್ತವಲ್ಲವೇ; ಮುಂದಿನ ದಿನಗಳಲ್ಲಿ ಸರ್ಕಾರ ಇದರ ಬಗ್ಗೆ ತೆಗೆದು ಕೊಳ್ಳುವ ಕ್ರಮಗಳೇನು;

ಡಾ: ಹೆಚ್. ಸಿ. ಮಹದೇವಪ್ಪ (ಲೋಕೋಪಯೋಗಿ ಸಚಿವರು)

ಅ) ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ತಾಲ್ಲೂಕಿನಲ್ಲಿ ಮರಳು ಲಾರಿ ಸಂಚಾರದಿಂದ ಯಾವುದೇ ರಸ್ತೆಗಳು ಹಾಳಾಗಿರುವುದಿಲ್ಲ.

ಆ) ಶಿರಸಿ ವಿಭಾಗದ ಮರಳು ಗಣಿಗಾರಿಕೆ ನಡೆಸುತ್ತಿಲ್ಲವಾದ್ದರಿಂದ ಮರಳು ಸಾಗಾಣಿಕೆಯಿಂದ ಇಲಾಖೆಗೆ ಯಾವುದೇ ಆದಾಯ ಇರುವುದಿಲ್ಲ.

ಇ) ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಐ 357 ಎಂಎಂ ಎನ್.2012, ದಿನಾಂಕ: 16.12.2013ರ ಮೈನ್ಸ್ ಆಂಡ್ ಮಿನರಲ್ಸ್ (ರೆಗ್ಯುಲೇಷನ್ ಮತ್ತು ಡೆವಲಪ್‌ಮೆಂಟ್) ಆಕ್ಟ್, 1657 ರ ಪ್ರಕಾರ ಮರಳಿನ ಮಾರಾಟ ಹಾಗೂ ರಾಜಧನದ ರೂಪದಲ್ಲಿ ಸ್ವೀಕೃತವಾಗುವ ಆದಾಯವನ್ನು ರಾಜ್ಯದ ಸಂಚಿತ ರಾಜಪ್ಪ ನಿಧಿಗೆ ಜಮೆ ಮಾಡಲಾಗುವುದು. ಆದರೆ ಸಂಗ್ರಹಿಸಲಾದ ರಾಜಧನದ ಮೊತ್ತದಲ್ಲಿ ಆಯಾ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಸಂಗ್ರಹಿಸಲಾದ ರಾಜಧನ ಮೊತ್ತಕ್ಕೆ ಶೇ.

25 ರಷ್ಟು ಮೊತ್ತವನ್ನು ಗ್ರಾಮ ಪಂಚಾಯತ್‌ಗಳಿಗೆ ಆರ್ಥಿಕ ಇಲಾಖೆಯು ನೇರವಾಗಿ ಅನುದಾನ ಬಿಡುಗಡೆ ಮಾಡಲಾಗುತ್ತಿದೆ.

ರಸ್ತೆ ಟೋಲ್ ಸಂಗ್ರಹ ಪ್ರಯಾಣಿಕರಿಗೆ ತೊಂದರೆ

1851 (2109); ಶ್ರೀ ಅಶೋಕ್ ಆರ್. (ಪದ್ಮನಾಭ ನಗರ)

ಅ) ರಸ್ತೆ ಟೋಲ್ ಸಂಗ್ರಹಿಸುವ ಮಾರ್ಗಗಳಿಗೆ ಬದಲಿಯಾಗಿ ಸರ್ವಿಸ್ ರಸ್ತೆಗಳನ್ನು ನಿರ್ಮಿಸದಿರಲು ಕಾರಣಗಳೇನು;

ಆ) ಹೆದ್ದಾರಿ ರಸ್ತೆಗಳಲಿಂದ ಸಂಗ್ರಹಿಸುವ ಶುಲ್ಕ ವಸೂಲಿ, ದಂಡ ಇವುಗಳಿಂದ ಸ್ಥಳೀಯರಿಗೆ ಅನಾನುಕೂಲವಾಗುತ್ತಿರುವುದರಿಂದ ಇದನ್ನು ತಪ್ಪಿಸಲು ಸರ್ವೀಸ್ ರಸ್ತೆಗಳನ್ನು ನಿಮಿಸಲು ಸರ್ಕಾರಕ್ಕಿರುವ ತೊಂದರೆ ಗಳೇನು;

ಇ) ಹೆದ್ದಾರಿ ರಸ್ತೆ ನಿರ್ಮಿಸಿ, ಟೋಲ್ ಸಂಗ್ರಹಕ್ಕೆ ಅವಕಾಶ ಕಲ್ಪಿಸಿ ಪರ್ಯಾಯ ಬಳಕೆ ರಸ್ತೆ ನಿರ್ಮಿಸದಿರುವ ಮಾರ್ಗಗಳು ಯಾವುವು;

ಈ) ನೆಲಮಂಗಲ, ಹೊಸಕೋಟೆ ಹಾಗೂ ದೇವನಹಳ್ಳಿಯಿಂದ ಸ್ವಂತ ವಾಹನದಲ್ಲಿ ರಸ್ತೆ ಮೂಲಕ ಸಂಚರಿಸಿದಲ್ಲಿ ಪೆಟ್ರೋಲ್, ಡೀಸೆಲ್‌ಗಾಗಿ ಖರ್ಚಾಗುವ ಮೊತ್ತಕ್ಕಿಂತ ಟೋಲ್ ದರವು ದುಪ್ಪಟ್ಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಹಾಗಿದ್ದಲ್ಲಿ ಸರ್ಕಾರ ವಿವೇಚನೆ ಯಿಂದ ವರ್ತಿಸಿ ಪ್ರಯಾಣಿಕರಿಗೆ ನ್ಯಾಯ ದೊರಕಿಸುವ ಕ್ರಮ ಕೈಗೊಳ್ಳುವುದೇ;

ಉ) ರಸ್ತೆ ನಿರ್ಮಾಣ ಹಂತದಲ್ಲೇ ಇಂತಹ ಷರತ್ತುಗಳನ್ನು ಅಳವಡಿಸಲು ಸರ್ಕಾರ ಮುಂದಾಗುವುದೇ?

ಡಾ: ಹೆಚ್. ಸಿ. ಮಹದೇವಪ್ಪ (ಮಾನ್ಯ ಲೋಕೋಪಯೋಗಿ ಸಚಿವರು)

ಅ) **ಮತ್ತು (ಆ)**: ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರ ವ್ಯಾಪ್ತಿ ಯಲ್ಲಿ ಬರುವ ರಾಷ್ಟ್ರೀಯ ಹೆದ್ದಾರಿಯಲ್ಲಿ ಅಭಿವೃದ್ಧಿಗೊಳಿಸುತ್ತಿರುವ